**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಭಟ್ಕಳ**

**ಸಿಸಿ ನಂಬರಃ 714/2021**

**ಸಿ.ಡಬ್ಲ್ಯೂಃ 01, ಪಿ.ಡಬ್ಲ್ಯೂಃ 01**

ಸಾಕ್ಷಿದಾರರ ಹೆಸರು : ಹೆಚ್ ಓಂಕಾರಪ್ಪ

ತಂದೆಯ ಹೆಸರು : ಹನಮಂತಪ್ಪ

ವಯಸ್ಸು : 65 ವರ್ಷ

ಉದ್ಯೋಗ : ನಿವೃತ್ತ ಪೊಲೀಸ್ ಉಪ ನಿರೀಕ್ಷಕರು

ವಾಸ್ತವ್ಯ : ಯರೆಗುಂಟೆ ರಸ್ತೆ, ದಾವಣಗೆರೆ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 08/04/2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಗ್ರಾಮೀಣ ಪೊಲೀಸ ಠಾಣೆಯಲ್ಲಿ ನವೆಂಬರ 2019 ರಿಂದ ಎಪ್ರಿಲ್ 2021 ರವರೆಗೆ ಪೊಲೀಸ್ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 30.01.2021 ರಂದು ಸಂಜೆ 06.30 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಹೆಬಳೆ ಗ್ರಾಮದಿಂದ ಸಾರ್ವಜನಿಕರೊಬ್ಬರು ಫೋನ್ ಮಾಡಿ ಹನೀಫಾಬಾದ್ ನ 5 ನೇ ಕ್ರಾಸ್ ನಲ್ಲಿ ಮಸೀದಿಯ ಹತ್ತಿರ ಇಬ್ರಾಹಿಂ ಹವ್ವಾ ರವರ ಮನೆಯ ಹತ್ತಿರ ಒಂದು ಕೊಟ್ಟಿಗೆಯಲ್ಲಿ ಹಿಂಸಾತ್ಮಕ ರೀತಿಯಲ್ಲಿ ಆಹಾರ ಮತ್ತು ನೀರನ್ನು ನೀಡದೇ ಜಾನುವಾರುಗಳನ್ನು ಕಟ್ಟಿ ಹಾಕಿದ ಬಗ್ಗೆ ಮಾಹಿತಿ ನೀಡಿರುತ್ತಾರೆ. ನಂತರ ನಾನು ಮತ್ತು ನನ್ನ ಸಿಬ್ಬಂಧಿಯಾದ ಚಾಸಾ-4 ಮತ್ತು 5 ರವರ ಜೊತೆ ನನ್ನ ಇಲಾಖಾ ಜೀಪಿನಲ್ಲಿ ಕರೆದುಕೊಂಡು ಮಾಹಿತಿ ಬಂದ ಸ್ಥಳಕ್ಕೆ ಹೋಗಿರುತ್ತೇವೆ. ಆಗ ಸ್ವಲ್ಪ ದೂರದಲ್ಲಿ ನಮ್ಮನ್ನು ಒಬ್ಬ ವ್ಯಕ್ತಿ ನೋಡಿ ಓಡಿ ಹೋಗಿರುತ್ತಾನೆ. ಆಗ ಅಕ್ಕಪಕ್ಕದ ಮನೆಯವರನ್ನು ವಿಚಾರಿಸಿದಾಗ ಓಡಿ ಹೋದ ವ್ಯಕ್ತಿ ಇಬ್ರಾಹಿಂ ಹವ್ವಾ ಎಂದು ಹೇಳಿರುತ್ತಾರೆ. ನಾನು ಮತ್ತು ನನ್ನ ಸಿಬ್ಬಂಧಿಗಳು ಆತನನ್ನು ಹಿಡಿಯಲು ಪ್ರಯತ್ನಿಸಿದರೂ ಆತ ಸಿಕ್ಕಿರುವುದಿಲ್ಲ. ನಂತರ ಮಾಹಿತಿ ಬಂದ ಮನೆಯ ಅಕ್ಕಪಕ್ಕ ನೋಡಿದಾಗ ಒಂದು ಕೊಟ್ಟಿಗೆಯಲ್ಲಿ ಹಿಂಸಾತ್ಮಕ ರೀತಿಯಲ್ಲಿ ಆಹಾರ ಮತ್ತು ನೀರನ್ನು ನೀಡದೇ ಮೂರು ಎತ್ತು ಮತ್ತು ಎರಡು ಹಸುಗಳನ್ನು ಕಟ್ಟಿ ಹಾಕಿದ್ದು ಕಂಡುಬಂದಿರುತ್ತದೆ. ಅವುಗಳನ್ನು ಕೊಟ್ಟಿಗೆಯಿಂದ ಹೊರಗೆ ತೆಗೆದು ಸ್ಥಳಕ್ಕೆ ಪಂಚಸಾಕ್ಷಿದಾರರಾದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಪಂಚನಾಮೆಯನ್ನು ರಾತ್ರಿ 7.00 ರಿಂದ 8.00 ಗಂಟೆಯವರೆಗೆ ತಯಾರಿಸಿರುತ್ತೇನೆ. ಹಾಗೆ ಸ್ಥಳದಲ್ಲಿ ಫೋಟೊ ತೆಗೆದಿರುತ್ತೇವೆ. ಸಾಕ್ಷಿಯು ಸದ್ರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ನಂತರ ಪಂಚನಾಮೆಯ ಕಾಲಕ್ಕೆ ಫೋಟೊ ತೆಗೆದಿರುತ್ತೇವೆ. ಸಾಕ್ಷಿಯು ಒಂದು ಫೋಟೊ ನೋಡಿ ಗುರುತಿಸಿದ್ದು ಅದನ್ನು ಗುರುತಿಸಲು ಆರೋಪಿಪರ ವಕೀಲರು ಸಾಕ್ಷ್ಯ ಅಧಿನಿಯಮ ಕಲಂ 65 ಬಿ ರಂತೆ

ಪ್ರಮಾಣ ಪತ್ರ ಮತ್ತು ಫೋಟೊವಿನ ಸಿಡಿ ಇಲ್ಲ ಎಂದು ತಕರಾರು ಮಾಡಿದ್ದು ಅವರ ತಕರಾರಿಗೆ ಒಳಪಟ್ಟು ನಿಪಿ–2 ಎಂದು ಗುರುತಿಸಲಾಯಿತು.

3. ನಂತರ ಜಪ್ತುಪಡಿಸಿದ ಎತ್ತು ಮತ್ತು ಹಸುಗಳನ್ನು ಠಾಣೆಗೆ ತೆಗೆದುಕೊಂಡು ಹೋಗಿ ಪಂಚನಾಮೆ ಮತ್ತು ಜಪ್ತುಪಡಿಸಿದ ಜಾನುವಾರುಗಳನ್ನು ಚಾಸಾ–8 ರವರಿಗೆ ಹಸ್ತಾಂತರಿಸಿ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ಸದ್ರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–3 ಎ ಎಂದು ಗುರುತಿಸಲಾಯಿತು. ಆರೋಪಿಯನ್ನು ನಾನು ನೋಡಿರುವುದಿಲ್ಲ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಹೆಚ್ ಎನ್ ವಕೀಲರಿಂದ,**

ದಿನಾಂಕ 30.01.2021 ರಂದು ನಾನು ಕರ್ತವ್ಯದಲ್ಲಿ ಇದ್ದ ಬಗ್ಗೆ ದಾಖಲೆ ಇರುತ್ತದೆ. ಸದ್ರಿ ದಾಖಲೆಯನ್ನು ಈ ದಿನ ನ್ಯಾಯಾಲಯದಲ್ಲಿ ನೋಡಿರುವುದಿಲ್ಲ. ಮಾಹಿತಿ ಬಂದ ಮನೆಯು ಯಾರಿಗೆ ಸೇರಿದ್ದು ಎಂಬ ಬಗ್ಗೆ ದಾಳಿ ಪೂರ್ವದಲ್ಲಿ ವಿಚಾರಿಸಿರುವುದಿಲ್ಲ. ನಾನು ಹೇಳುವಂತಹ ದಾಳಿಯನ್ನು ಅಕ್ಕಪಕ್ಕದ ಮನೆಯವರು ನೋಡಿರುತ್ತಾರೆ. ಗುನ್ನಾ ಸ್ಥಳಕ್ಕೆ ನನ್ನ ಜೀಪ್ ಚಾಲಕ ಮತ್ತು ಇನ್ನೊಬ್ಬ ಸಿಬ್ಬಂಧಿ ಮತ್ತು ಪಂಚಸಾಕ್ಷಿಗಳು ಹೋಗಿರುತ್ತೇವೆ. ನಿಪಿ–2 ಫೋಟೊವನ್ನು ಸಾರ್ವಜನಿಕರೊಬ್ಬರು ತೆಗೆದಿರುತ್ತಾರೆ. ಫೋಟೊ ತೆಗೆದ ವ್ಯಕ್ತಿ ಯಾರು ಎಂದು ಗೊತ್ತಿಲ್ಲ. ಸದ್ರಿ ಫೋಟೊವನ್ನು ನನ್ನ ಸಿಬ್ಬಂಧಿಯಾದ ಚಾಸಾ–5 ರವರ ಮೊಬೈಲ್ ನಿಂದ ತೆಗೆದಿರುತ್ತಾರೆ. ಪಂಚಸಾಕ್ಷಿಗಳು ಗುನ್ನಾ ಸ್ಥಳದಲ್ಲೇ ಇದ್ದರು. ಅವರನ್ನು ಪಂಚಸಾಕ್ಷಿಗಳಾಗಲು ನಾನೇ ಕೇಳಿಕೊಂಡಿರುತ್ತೇನೆ. ಪಂಚನಾಮೆಯನ್ನು ನಾನು ಹೇಳಿದಂತೆ ಚಾಸಾ–5 ರವರು ಬೆರಳಚ್ಚು ಮಾಡಿರುತ್ತಾರೆ. ನಿಪಿ–2 ರಲ್ಲಿ ಲ್ಯಾಪಟಾಪ್ ಇರುವ ಬಗ್ಗೆ ಕಂಡುಬರುವುದಿಲ್ಲ ಎಂದರೆ ಸರಿ. ಪಂಚನಾಮೆ ತಯಾರಿಸುವಾಗ ರಾತ್ರಿಯಾಗಿತ್ತು. ಪಂಚನಾಮೆಯ ಪ್ರಿಂಟನ್ನು ಸ್ಥಳದಲ್ಲೇ ತೆಗೆದಿರುತ್ತೇವೆ. ಪ್ರಿಂಟರ್ ನ್ನು ಸ್ಥಳಕ್ಕೆ ತೆಗೆದುಕೊಂಡು ಹೋಗಿದ್ದೆವು. ಪಂಚನಾಮೆಯನ್ನು ಠಾಣೆಯಲ್ಲಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಪಂಚಸಾಕ್ಷಿಗಳ ಸಹಿಗಳನ್ನು ಠಾಣೆಯಲ್ಲಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳುವಂತಹ ಜಾನುವಾರುಗಳಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

2. ಈ ಪ್ರಕರಣವನ್ನು ಅಂಕಿಅಂಶಗಳಿಗೋಸ್ಕರ ನಾನೇ ಸೃಷ್ಟಿಸಿ, ಸುಳ್ಳು ದೂರು ನೀಡಿ, ನನ್ನ ಸಿಬ್ಬಂಧಿಗಳನ್ನೇ ಸಾಕ್ಷಿಗಳನ್ನಾಗಿ ಮಾಡಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ಈ ಪ್ರಕರಣದಲ್ಲಿರುವ ಜಾನುವಾರುಗಳಿಗೂ, ಆರೋಪಿಗೂ ಯವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಗುನ್ನಾ ಸಂಖ್ಯೆಯನ್ನು ನಮೂದು ಮಾಡಿರುವುದಿಲ್ಲ. ಪಂಚನಾಮೆಯ ನಂತರ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಲಾಗಿರುತ್ತದೆ.

**ಮರುವಿಚಾರಣೆ ಇಲ್ಲ**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾ.ದಂ., ಭಟ್ಕಳ.**